## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ: ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಬಾಕಿ ಶುಲ್ಕ ಮರುಪಾವತಿ ಮಾಡುವ ಬಗ್ಗೆ**

**ಓದಲಾಗಿದೆ**
1. ಸರ್ಕಾರದ ಆದೇಶ ಸಂಖ್ಯೆ ಸಕಇ 357 ಬಿಎಂಎಸ್ 2012 ದಿನಾಂಕ:07.11.2012.
2. ಸರ್ಕಾರದ ಪತ್ರ ಸಂಖ್ಯೆ ಸಕಇ 357 ಬಿಎಂಎಸ್ 2012 ದಿನಾಂಕ:17.11.2012.
3. ಸರ್ಕಾರದ ಆದೇಶ ಸಂಖ್ಯೆ ಸಕಇ 357 ಬಿಎಂಎಸ್ 2012 ದಿನಾಂಕ:22.11.2012.
4. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಏಕಕಡತ ಪ್ರಸ್ತಾವನೆ ಸಂ.ಹಿಂವಕನಿ/ಶುವಿ/ಸಿಆರ್-10/2013-14, ದಿನಾಂಕ 14.08.2013.

**ಪ್ರಸ್ತಾವನೆ**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ, ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಶುಲ್ಕವಿನಾಯಿತಿ/ಮರುಪಾವತಿ ಮಾಡುವ ಸಂಬಂಧ ಆದೇಶವನ್ನು ಹೊರಡಿಸಲಾಗಿದೆ. ಮೇಲೆ ಓದಲಾದ ಕ್ರ.ಸಂ.(3)ರ ಆದೇಶದಲ್ಲಿ, 2012-13ನೇ ಸಾಲಿಗೆ ಯಾವ ಕೋರ್ಸಿಗೆ ಯಾವ ದರದಂತೆ ಪರೀಕ್ಷಾ ಶುಲ್ಕ, ಭೋದನಾ ಶುಲ್ಕ, ಪ್ರಯೋಗಾಲಯ ಶುಲ್ಕ, ಕ್ರೀಡಾ ಶುಲ್ಕ ಮತ್ತು ಗ್ರಂಥಾಲಯ ಶುಲ್ಕಗಳನ್ನು ಪಾವತಿ ಮಾಡಬೇಕೆಂಬುದರ ಬಗ್ಗೆ ವಿವರಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸರ್ಕಾರದ ಪತ್ರದಲ್ಲಿ ಕರ್ನಾಟಕ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ/ಮರುಪಾವತಿ ಮಾಡುವ ಬಗ್ಗೆ ಆಧ್ಯತೆಗಳನ್ನು ನಿಗದಿಪಡಿಸಿ ಅದರಂತೆ ಪಾವತಿ ಮಾಡಬೇಕೆಂದು ಸೂಚಿಸಲಾಗಿದೆ. ಹಾಗೂ 2004-05ನೇ ಸಾಲಿನಿಂದ 2012-13ನೇ ಸಾಲಿನವರೆಗೆ ಶುಲ್ಕ ಮರುಪಾವತಿಗೆ ಸಂಬಂಧಿಸಿದಂತೆ ಬಿಲ್ಲುಗಳು ಬಾಕಿ ಇದ್ದು, ಹಾಲಿ ಜಿಲ್ಲಾವಾರು ಬಾಕಿ ಇರುವ ವಿವರಗಳೊಂದಿಗೆ, ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (4)ರಲ್ಲಿ ಏಕ ಕಡತದ ಮುಖೇನ ಪ್ರಸ್ತಾವನೆಯನ್ನು ಸಲ್ಲಿಸಿ, ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ಮಾಡಲು ಕೋರಿರುತ್ತಾರೆ.

ಈ ಕಾರಣದಿಂದ, ದಿನಾಂಕ:12-07-2013 ರಂದು ಮಂಡಿಸಿದ ಆಯವ್ಯಯ ಭಾಷಣದಲ್ಲಿ "ಹಿಂದಿನ ಸರ್ಕಾರದ ಅವಧಿಯ ಬಾಕಿ ಉಳಿದಿರುವ ಎಲ್ಲಾ ಶುಲ್ಕ ಮರುಪಾವತಿ ಬಿಲ್ಲುಗಳನ್ನು ಇತ್ಯರ್ಥ ಪಡಿಸಲು ರೂ.165.00 ಕೋಟಿಗಳನ್ನು ಹೆಚ್ಚುವರಿಯಾಗಿ ಒದಗಿಸಲಾಗುವುದು. ಇದರಿಂದ ಸುಮಾರು 4.5 ಲಕ್ಷ ವಿದ್ಯಾರ್ಥಿಗಳು ಪ್ರಯೋಜನಾ ಪಡೆಯುತ್ತಾರೆ. ಪ್ರಸಕ್ತ ಸಾಲಿಗೆ ಶುಲ್ಕ ಮರುಪಾವತಿಗಾಗಿ 70.00 ಕೋಟಿ ರೂಗಳನ್ನು ಒದಗಿಸಲಾಗುವುದು" ಎಂದು ಘೋಷಣೆ ಮಾಡಲಾಗಿದೆ.

ಮೇಲಿನ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಬಾಕಿ ಶುಲ್ಕ ಪಾವತಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ ಹಿಂವಕ 539 ಬಿಎಂಎಸ್ 2013, ಬೆಂಗಳೂರು, ದಿನಾಂಕ:04.12.2013**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿಗಳಿಗೆ 2004-05ನೇ ಸಾಲಿನಿಂದ 2012-13ನೇ ಸಾಲಿನವರೆಗೆ ಬಾಕಿ ಇದ್ದ ಒಟ್ಟು ರೂ.13152.47 ಲಕ್ಷಗಳನ್ನು (ಒಂದು ನೂರ ಮೂವತ್ತೊಂದು ಕೋಟಿ ಐವತ್ತೆರಡು ಲಕ್ಷದ ನವಲತ್ತೇಳು ಸಾವಿರ ರೂಪಾಯಿಗಳು ಮಾತ್ರ) **ಅನುಬಂಧ-1ರಲ್ಲಿ** ತೋರಿಸಿರುವಂತೆ, ಜಿಲ್ಲಾವಾರು, ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟು ಪಾವತಿಸಲು ಬಿಡುಗಡೆ ಮಾಡಿ ಆದೇಶಿಸಿದೆ.

ಷರತ್ತುಗಳು

1. ಆಯಾ ವರ್ಷಕ್ಕೆ ಅನ್ವಯವಾಗುವ ನಿಯಮಗಳ ಅನುಸಾರ ಆಯಾ ವರ್ಷಕ್ಕೆ ನಿಗದಿಪಡಿಸಲಾಗಿದ್ದ ವಿವಿಧ ಶುಲ್ಕಗಳ ದರಗಳಿಗೆ ಅನುಸಾರವಾಗಿ, ಪಾವತಿ ಮಾಡತಕ್ಕದ್ದು.
2. ಯಾವ ವಿದ್ಯಾರ್ಥಿಗೆ ಹಿಂದಿನ ವರ್ಷಗಳ ಎಷ್ಟು ಮೊತ್ತವನ್ನು ಬಾಕಿಯಾಗಿ ಪಾವತಿಸಬೇಕು ಎಂಬುದನ್ನು ಸರಿಯಾದ ರೀತಿಯಲ್ಲಿ ಲೆಕ್ಕ ಹಾಕಿ ಈ ಮೊತ್ತವನ್ನು ಆಯಾ ವಿದ್ಯಾರ್ಥಿಯ ಬ್ಯಾಂಕ್ ಖಾತೆಗೆ ಜಮಾ ಮಾಡತಕ್ಕದ್ದು.
3. ಈ ಸಂಬಂಧ ಆಯುಕ್ತರು ಸುತ್ತೋಲೆಯ ಮೂಲಕ ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನವನ್ನು ನೀಡತಕ್ಕದ್ದು.

ಈ ವೆಚ್ಚವನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ವಲಯ ಯೋಜನೇತರ ಲೆಕ್ಕ ಶೀರ್ಷಿಕೆ 2225-00-103-0-28 ರಡಿ "ಹಿಂದುಳಿದ ವರ್ಗಗಳಿಗೆ ಇತರೆ ರಿಯಾಯಿತಿಗಳು" ಈ ಬಾಬ್ತಿನಲ್ಲಿ 2013-14ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ರೂ.165.00 ಕೋಟಿ lumpsum ಅನುದಾನದಿಂದ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ.ಆಇ 724 ವೆಚ್ಚ-3/2013, ದಿನಾಂಕ:11.11.2013 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಿದೆ.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ**
**ಮತ್ತು ಅವರ ಹೆಸರಿನಲ್ಲಿ**

**(ಚಿಕ್ಕೇಗೌಡ)**
**ಸರ್ಕಾರದ ಉಪ ಕಾರ್ಯದರ್ಶಿ**
**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ**

ಇವರಿಗೆ :

ಕರ್ನಾಟಕ ರಾಜ್ಯಪತ್ರದ ಸಂಕಲನಕಾರರು, ಬೆಂಗಳೂರು ಇವರಿಗೆ ಕರ್ನಾಟಕ ರಾಜ್ಯಪತ್ರದ ಮುಂದಿನ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಬೇಕೆಂದು ಕೋರಿದೆ. ಇದರ ಮುದ್ರಿತ 10 ಬಿಡಿ ಪ್ರತಿಗಳನ್ನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಗೆ ಹಾಗೂ 1,000 ಪ್ರತಿಗಳನ್ನು ನೇರವಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರಿಗೆ ಕಳುಹಿಸಿಕೊಡತಕ್ಕದ್ದು.

ಗೆ,

1. ಮಹಾಲೇಖಪಾಲರು,(ಎ ಮತ್ತು ಇ) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ(ವೆಚ್ಚ-3), ಬೆಂಗಳೂರು.
3. ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ, ಆಪ್ತಕಾರ್ಯದರ್ಶಿಗಳು, ವಿಧಾನಸೌಧ ಬೆಂಗಳೂರು.
4. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು
5. ಆಂತರಿಕ ಆರ್ಥಿಕ ಸಲಹೆಗಾರರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು
6. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.
7. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
8. ರಾಜ್ಯದ ಎಲ್ಲಾ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಆಪ್ತ ಕಾರ್ಯದರ್ಶಿ
10. ಸರ್ಕಾರದ ಉಪ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರು
11. ಶಾಖಾ ರಕ್ಷ ಕಡತ.
12. ಹೆಚ್ಚುವರಿ ಪ್ರತಿಗಳು

ಸರ್ಕಾರದ ಆದೇಶ ಸಂಖ್ಯೆ ಹಿಂವಕ 539 ಬಿಎಂಎಸ್ 2013 ಬೆಂಗಳೂರು, ದಿನಾಂಕ 4.12.2013ಕ್ಕೆ ಅನುಬಂಧ

2013-14ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾಗಿರುವ ರೂ.165.00 ಕೋಟಿ lumpsum ಅನುದಾನದಲ್ಲಿ, ಹಿಂದಿನ ಸಾಲುಗಳ ಬಾಕಿ ಶುಲ್ಕವನ್ನು ಪಾವತಿಸಲು, ಜಿಲ್ಲಾವಾರು ಬಿಡುಗಡೆ ಮಾಡಲಾಗಿರುವ ಅನುದಾನದ ವಿವರಗಳು

(ರೂ.ಲಕ್ಷಗಳಲ್ಲಿ)

| ಕ್ರ.ಸಂ. | ಜಿಲ್ಲಾ ಕೋಡ್ ಸಂಖ್ಯೆ | ಜಿಲ್ಲೆ | 2004-05 ರಿಂದ 2011-12ನೇ ಸಾಲಿನವರೆಗೆ ಬಾಕಿ ಇದ್ದ ಮೊತ್ತ | 2012-13ನೇ ಸಾಲಿನಲ್ಲಿ ಬಾಕಿ ಇದ್ದ ಮೊತ್ತ | 2004-05 ರಿಂದ 2012-13ನೇ ಸಾಲಿನವರೆಗೂ ಬಾಕಿ ಇದ್ದ ಒಟ್ಟು ಮೊತ್ತ (4+5) | 2012-13ನೇ ಸಾಲಿನಲ್ಲಿ ಬಿಡುಗಡೆ ಮಾಡಿದ ಮೊತ್ತ | 2012-13ನೇ ಸಾಲಿನ ಅಂತ್ಯಕ್ಕೆ ಬಾಕಿ ಇದ್ದ ಒಟ್ಟು ಮೊತ್ತ (6-7) | 2012-13ನೇ ಸಾಲಿನ ಅಂತ್ಯಕ್ಕೆ ಜಿಲ್ಲೆಗೆ ಹೆಚ್ಚುವರಿಯಾಗಿ ಬಿಡುಗಡೆ ಮಾಡಲಾಗಿರುವ ಒಟ್ಟು ಮೊತ್ತ | ಜಿಲ್ಲಾವಾರು ಬಿಡುಗಡೆ ಮಾಡಲಾಗಿರುವ ಮೊತ್ತ |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| 1 | 401 | ಬೆಂಗಳೂರು ನಗರ | 2521.33 | 2697.88 | 5219.21 | 1263.00 | 3956.21 | | 3956.21 |
| 2 | 402 | ಬೆಂಗಳೂರು (ಗ್ರಾ) | 191.67 | 234.23 | 425.90 | 147.00 | 278.90 | | 278.90 |
| 3 | 403 | ಚಿತ್ರದುರ್ಗ | 120.76 | 171.78 | 292.54 | 176.00 | 116.54 | | 116.54 |
| 4 | 404 | ಕೋಲಾರ | 152.96 | 64.73 | 217.69 | 100.00 | 117.69 | | 117.69 |
| 5 | 405 | ಶಿವಮೊಗ್ಗ | 522.40 | 27.70 | 550.10 | 575.00 | 0.00 | 24.90 | 0.00 |
| 6 | 406 | ತುಮಕೂರು | 877.36 | 740.58 | 1617.94 | 400.00 | 1217.94 | | 1217.94 |
| 7 | 451 | ದಾವಣಗೆರೆ | 438.26 | 417.58 | 855.84 | 531.00 | 324.84 | | 324.84 |
| 8 | 452 | ರಾಮನಗರ | 180.37 | 102.32 | 282.69 | 97.00 | 185.69 | | 185.69 |
| 9 | 453 | ಚಿಕ್ಕಬಳ್ಳಾಪುರ | 36.11 | 134.67 | 170.78 | 65.00 | 105.78 | | 105.78 |
| 10 | 407 | ಮೈಸೂರು | 1143.43 | 453.43 | 1596.86 | 785.00 | 811.86 | | 811.86 |
| 11 | 408 | ಚಿಕ್ಕಮಗಳೂರು | 216.81 | 317.52 | 534.33 | 195.00 | 339.33 | | 339.33 |
| 12 | 409 | ದಕ್ಷಿಣ ಕನ್ನಡ | 683.83 | 416.87 | 1100.70 | 327.00 | 773.70 | | 773.70 |
| 13 | 410 | ಹಾಸನ | 616.42 | 167.16 | 783.58 | 498.00 | 285.58 | | 285.58 |
| 14 | 411 | ಕೊಡಗು | 81.92 | 61.89 | 143.81 | 50.00 | 93.81 | | 93.81 |

| | | | | | | | | |
|---|---|---|---|---|---|---|---|---|
| 15 | 412 | ಮಂಡ್ಯ | 478.73 | 427.92 | 906.65 | 423.00 | 483.65 | | 483.65 |
| 16 | 456 | ಚಾಮರಾಜನಗರ | 137.74 | 67.64 | 205.38 | 178.00 | 27.38 | | 27.38 |
| 17 | 457 | ಉಡುಪಿ | 155.44 | 137.80 | 293.24 | 208.00 | 85.24 | | 85.24 |
| 18 | 413 | ಬೆಳಗಾಂ | 364.90 | 75.00 | 439.90 | 555.00 | 0.00 | 115.10 | 0.00 |
| 19 | 414 | ಬಿಜಾಪುರ | 250.89 | 271.50 | 522.39 | 535.00 | 0.00 | 12.61 | 0.00 |
| 20 | 415 | ಧಾರವಾಡ | 212.59 | 530.58 | 743.17 | 327.00 | 416.17 | | 416.17 |
| 21 | 416 | ಉತ್ತರ ಕನ್ನಡ | 215.06 | 81.13 | 296.19 | 170.00 | 126.19 | | 126.19 |
| 22 | 461 | ಬಾಗಲಕೋಟೆ | 149.57 | 286.02 | 435.59 | 234.00 | 201.59 | | 201.59 |
| 23 | 462 | ಗದಗ | 120.53 | 196.43 | 316.96 | 165.00 | 151.96 | | 151.96 |
| 24 | 463 | ಹಾವೇರಿ | 77.32 | 110.43 | 187.75 | 161.00 | 26.75 | | 26.75 |
| 25 | 417 | ಗುಲ್ಬರ್ಗಾ | 893.89 | 1146.98 | 2040.87 | 591.00 | 1449.87 | | 1449.87 |
| 26 | 418 | ಬಳ್ಳಾರಿ | 501.68 | 111.34 | 613.02 | 507.00 | 106.02 | | 106.02 |
| 27 | 419 | ಬೀದರ್ | 744.38 | 541.80 | 1286.18 | 376.00 | 910.18 | | 910.18 |
| 28 | 420 | ರಾಯಚೂರು | 259.89 | 418.79 | 678.68 | 182.00 | 496.68 | | 496.68 |
| 29 | 421 | ಯಾದಗಿರಿ | 106.91 | 33.00 | 139.91 | 77.00 | 62.91 | | 62.91 |
| 30 | 466 | ಕೊಪ್ಪಳ | 44.12 | 48.12 | 92.24 | 102.00 | 0.00 | 9.76 | 0.00 |
| | | ಒಟ್ಟು | **12497.28** | **10492.82** | **22990.10** | **10000.00** | **13152.47** | **162.37** | **13152.47** |

(ಚಿಕ್ಕೇಗೌಡ)
ಸರ್ಕಾರದ ಉಪ ಕಾರ್ಯದರ್ಶಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು.